ಈ ದಳದವರು ಏನು ಕೆಲಸವನ್ನು ನಿರ್ವಹಿಸಬೇಕು ಎಂಬುದನ್ನು ರೂಲ್ಸ್ ಮಾಡಿ ತಿಳಿಸುವುದಾಗಿ ಹೇಳಿದ್ದಾರೆ. ಅದು ಸರಿಯೆಂದು ನನಗನಿಸುತ್ತದೆ. ಸರ್ವೇಸಾಧಾರಣವಾಗಿ ಗ್ರಾಮಗಳಲ್ಲಿ ಏನೊಂದು ದಳವೇರ್ಪಾಡಾಗುತ್ತದೆ ಅದರಲ್ಲಿ ದಕ್ಷರಾಗಿರುವವರನ್ನು ಕಮ್ಯಾಂಡರಾಗಿ ನೇಮಕ ಮಾಡಿ ಕೊತ್ವಾಲ ಎಂದು ಆತನನ್ನು ಕರೆಯುವರೆಂದು ವಿಧೇಯಕದಲ್ಲಿ ನಮೂದಾಗಿದೆ. ಸಾಧಾರಣವಾಗಿ ಗ್ರಾಮಗಳಲ್ಲಿ ಪೋಲೀಸ್ ಪಟೇಲ್ ದಕ್ಷನಾಗಿದ್ದರೆ ಸರಿಯಾದ ಸಾಮರ್ಥ್ಯವುಳ್ಳವನಾಗಿದ್ದರೆ ಅಂಥವನನ್ನು ಕೊತ್ವಾಲನನ್ನಾಗಿ ನೇಮಿಸುತ್ತಾರೆಂದು ನನಗನಿಸುತ್ತದೆ. ಕೊತ್ವಾಲನಾಗಿ ಕೆಲಸ ಮಾಡುವವರು ದಕ್ಷತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸುವಂಥವರಾಗಬೇಕು ಎಂದು ನಾನು ಅಭಿಪ್ರಾಯಪಡುತ್ತೇನೆ.

ಒಟ್ಟಿನಲ್ಲಿ ಈ ವಿಧೇಯಕ ದೇಶದ ಒಂದು ಸುರಕ್ಷತೆಗೆ, ಸಂರಕ್ಷಣೆಗೆ ಬಹಳ ಪ್ರಾಮುಖ್ಯವಾದುದಾಗಿದೆ. ಸರ್ಕಾರದವರು ಈ ಮಸೂದೆಯನ್ನು ತಂದು ದೇಶಕ್ಕೆ ಒಂದು ದೊಡ್ಡ ಉಪಕಾರವನ್ನು ಮಾಡುತ್ತಿದ್ದಾರೆ. ಇದನ್ನ ಸಕಲರೂ ಸ್ವಾಗತಿಸುವುದು ಅನಿವಾರ್ಯ, ಅತ್ಯಂತ ಅಗತ್ಯ ಎಂದು ಸೂಚಿಸಿ ಇದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೆ, ಹಿಂದೆ ಮುಂಬಾಯಿ ಕರ್ಣಾಟಕ ಪ್ರದೇಶದಲ್ಲಿ ಜಾರಿಯಲ್ಲಿದ್ದ ಗ್ರಾಮರಕ್ಷಣಾದಳದ ಕಾನೂನನ್ನನುಸರಿಸಿ ಈಗ ನಮ್ಮ ಮುಂದಿಟ್ಟಿರುವ ವಿಧೇಯಕವನ್ನು ಸ್ವಾಗತಿಸುತ್ತೇನೆ. ಹಳ್ಳಿಗಳ ಅಭಿವೃದ್ಧಿಗೆ ಮತ್ತು ಹಳ್ಳಿಗಳ ಜನರ ಸಂರಕ್ಷಣೆಗೆ ಈಗಾಗಲೇ ಗೃಹರಕ್ಷಣಾದಳ ಯುವಕ ಮಂಡಲಿ ಮತ್ತು ಸರ್ಕಾರದ ಗ್ರಾಮಸೇವಕರು ಮುಂತಾದವರಿದ್ದಾರೆ. ಈ ಗ್ರಾಮರಕ್ಷಕ ದಳ ಯಾವರೀತಿ ಕೆಲಸಮಾಡುತ್ತಿದೆಯೆಂಬುದನ್ನು ಪರಿಶೀಲಿಸಬೇಕಾಗಿದೆ. ಅದನ್ನು ಮಾಡಿ ಸರಿಯಾದ ರೀತಿಯಲ್ಲಿ ಸೂಪರ್‌ವಿಷನ್ ಮಾಡಿದರೆ ಈ ಕಾನೂನನ್ನು ಮಾಡಿದ್ದಕ್ಕೆ ಸಾರ್ಥಕವಾಗುತ್ತದೆ ಮತ್ತು ಹಳ್ಳಿಗರಿಗೆ ಉಪಯೋಗವಾಗುತ್ತದೆ ಎಂದೂ ಈ ಸಮಯದಲ್ಲಿ ಹೇಳುತ್ತೇನೆ. ಕೆಲವು ಹಳ್ಳಿಗಳಲ್ಲಿ ಜಗಳ ಮುಂತಾದವು ನಡೆದಾಗ ಈ ದಳ ಸಹಾಯಕಾರಿಯಾಗುತ್ತದೆ. ಅಷ್ಟೇ ಅಲ್ಲ, ಪಾನನಿರೋಧವಿರುವ ಕಡೆ ಪೋಲೀಸರಿಗೆ ಸಹಾಯಕಾರಿಯಾಗಿ ಕೆಲಸ ಮಾಡಬಹುದು. ಆದರೆ ಈಗ ಅಷ್ಟು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲವೆಂದು ವಿಷಾದಪಡಬೇಕಾಗಿದೆ.

ಈ ದಳಕ್ಕೆ ಸೇರಲು 16 ರಿಂದ 40 ವರ್ಷಗಳೊಳಗಿರುವವರಿಗೆ ಅವಕಾಶ ಕೊಡುವುದು ಸೂಕ್ತ, 20 ರಿಂದ 50 ವರ್ಷ ವಯಸ್ಸಿನೊಳಗಿರುವವರಿಗೆ ಅವಕಾಶ ಮಾಡಿರುವುದನ್ನು ಬದಲಾಯಿಸುವುದು ಒಳ್ಳೆಯದು. ಈಗಾಗಲೆ ಮುಂಬಯಿಯಲ್ಲಿ 16 ರಿಂದ 40 ವರ್ಷಗಳೊಳಗಿರುವವರಿಗೆ ಅವಕಾಶ ಕೊಟ್ಟಿದ್ದಾರೆ. ಅದರ ಸಲುವಾಗಿ ಇಲ್ಲೂ ಸಹ ಆ ವಯಸ್ಸಿನವರಿಗೆ ಅವಕಾಶ ಕೊಡಬೇಕು. ಅಷ್ಟೇ ಅಲ್ಲ, ಕ್ರಿಮಿನಲ್ ಮೆಂಟ್ಯಾಲಿಟಿ ಇರುವವರಿಗೆ ಸೇರಲು ಅವಕಾಶ ಕೊಡುವುದು ಬಹಳ ಅನುಚಿತ. ಅದಕ್ಕಾಗಿ ಶಿಕ್ಷೆಗೆ ಗುರಿಯಾದವರು, ಕುಡುಕರು ಮುಂತಾದವರಿಗೆ ಸ್ಥಾನವಿಲ್ಲ ಎಂದು ವಿಶದವಾಗಿ ಕಾನೂನಿನಲ್ಲಿ ಅಳವಡಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಷಯ—ಈ ಬಿಲ್ಲಿನಲ್ಲಿ ಮುಂಬಯಿನಲ್ಲಿರುವ ಪೋಲೀಸ್ ಆಕ್ಟಿನ ನಿಯಮಗಳನ್ನು ಪೂರ್ಣವಾಗಿ ಅಳವಡಿಸಿದರೆ ಒಳ್ಳೆಯದೆಂದು ತೋರುತ್ತದೆ. ಉದಾಹರಣೆಗೆ ಕೊತ್ವಾಲನ ನೇಮಕಕ್ಕೆ ಸಂಬಂಧಪಟ್ಟ ಮುಂಬಯಿ ಕಾನೂನಿನ ವಿಧಿ ಬಹಳ ಚೆನ್ನಾಗಿದೆ. ಅದನ್ನೇ ಇಲ್ಲೂ ಸೇರಿಸುವುದು ಉತ್ತಮ. ಮುಂಬಯಿ ಕಾನೂನಿನ ಕೆಲವು ನಿಯಮಗಳನ್ನು ಇಲ್ಲಿ ಬಿಟ್ಟಿರುವುದು ಸರಿಯಾಗಿ ಕಾಣುವುದಿಲ್ಲ. ಆನರೆರಿ ಕಮ್ಯಾಂಡೆಂಟ್‌ಗೆ ಸಂಭಾವನೆ ಕೊಡುವುದಕ್ಕೆ ಬದಲಾಗಿ ಸಂಬಳ ನಿಗದಿ ಮಾಡುವುದು ಸರಿಯಲ್ಲ. ಕೊತ್ವಾಲನನ್ನು ನೇಮಕ ಮಾಡುವ ಬಗ್ಗೆ ಇರುವ ನಿಯಮದಲ್ಲಿ ಆನರೆರಿ ಎಂಬ ಪದವನ್ನು ಸೇರಿಸುವುದು ಸೂಕ್ತ. ಪೋಲೀಸ್ ಪಟೇಲ್ ಕೋತ್ವಾಲನಾಗಲು ಅವಕಾಶ ಮಾಡುವುದು ಸೂಕ್ತ. ಹಾಗೆ ಮಾಡಿದರೆ ಅವರಿಗೆ ಪ್ರೋತ್ಸಾಹ ಕೊಟ್ಟಹಾಗಾಗುತ್ತದೆ.

ಸ್ಟೇಷನ್ ಮತ್ತು ಡಿಸ್ಟ್ರಿಕ್ಟ್ ವಿಲೇಜ್ ಡಿಫೆನ್ಸ್ ಆಫೀಸರುಗಳ ನೇಮಕದ ವಿಚಾರದಲ್ಲೂ ಮುಂಬಯಿನ ಆಕ್ಟಿಗೂ ಈ ವಿಧೇಯಕದಲ್ಲಿರುವುದಕ್ಕೂ ವ್ಯತ್ಯಾಸವಿದೆ. ಏರಿಯಾ ನಿಗದಿ ಮಾಡಿಲ್ಲ.

ನನ್ನ ಸೂಚನೆ ಏನೆಂದರೆ ಹೆಡ್ ಕಾನ್‌ಸ್ಟೇಬಲ್ ಒಬ್ಬನು ಪ್ರತಿಯೊಂದು ತಾಲ್ಲೂಕು ಯೂನಿಟ್ಟಿನಲ್ಲೂ ಇರುತ್ತಾರೆ. ಇವರ ಮೇಲೆ ಸರಿಯಾದ ಉಸ್ತುವಾರಿ ಮಾಡಲನುಕೂಲವಾಗುವಂತೆ ಒಬ್ಬ ಸಬ್ ಇನ್ಸ್‌ಪೆಕ್ಟರಿಗೆ ಅಧಿಕಾರವನ್ನು ಕೊಟ್ಟರೆ ಅವರು ಇವರ ಮೇಲೆ ಸೂಪರ್‌ವೈಸು ಮಾಡಲು ಅನುಕೂಲವಾಗುತ್ತದೆ.

ಇನ್ನು 11ನೇ ಕಲಮಿನಲ್ಲಿ ' ಕಂಟ್ರೋಲ್ ಅಂಡ್ ಟ್ರೇನಿಂಗ್ ಆಫ್ ಮೆಂಬರ್ಸ್ ಅಂಡ್ ಆಫೀಸರ್ಸ್ ಬಗ್ಗೆ ಹೇಳಿದ್ದಾರೆ. ಹೋಂ ಗಾರ್ಡ್ಸ್ ಬಿಲ್ಲಿನಲ್ಲೂ ಇದೇ ರೀತಿ ಟ್ರೇನಿಂಗು ಕೊಡಬೇಕೆಂದು ಹೇಳತಕ್ಕ ಕಲಮಿನಲ್ಲಿ ರೈಫಲ್ ಟ್ರೇನಿಂಗು ಮತ್ತು ಫಸ್ಟ್ ಏಡು ಇತ್ಯಾದಿಗಳನ್ನು ಕೊಡಬೇಕೆಂದು ಇತ್ತು. ಇದರಲ್ಲಿ ಇವುಗಳನ್ನೆಲ್ಲ ಯಾವ ರೀತಿ ಮಾಡಬೇಕೆನ್ನುವುದಕ್ಕೆ ನಿಯಮಗಳನ್ನು ಮಾಡಲಾಗುತ್ತದೆ ಎಂದಿದೆ ಇದಕ್ಕೆ ಬದಲಾಗಿ ಇದರ ವಿವರಗಳನ್ನು ಕಾನೂನಿನಲ್ಲೇ ಸೇರಿಸಿದರೆ ಚೆನ್ನಾಗಿರುತ್ತದೆ ಎಂದು ನನ್ನ ಅಭಿಪ್ರಾಯ. ಇದರಿಂದ ಈ ಗೃಹರಕ್ಷಕ ದಳಕ್ಕೆ ಸೇರುವವರಿಗೂ ಒಂದು ತರಹದ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಮತ್ತು ಯೂನಿಫಾರಂ ಗಿ ಮಾಡಿದಂತಾಗುತ್ತದೆ. 12ನೇ ಕ್ಲಾಸಿನಲ್ಲಿ ಇದರಲ್ಲಿರುವ ಸದಸ್ಯರುಗಳು ಯಾವ ಯಾವ ಕೆಲಸ ಳನ್ನು ಮಾಡಬೇಕೆನ್ನುವುದರ ಗ್ಗೆ ಹೇಳಲಾಗಿದೆ. ಇದರಲ್ಲಿ ಡೆಪ್ಯೂಟೀ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಎನ್ನುವುದನ್ನೂ ಇದರಲ್ಲಿ ಸೇರಿಸಿದ್ದಾರೆ. ಸಂಸ್ಥಾನಕ್ಕೆಲ್ಲಾ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಎನ್ನುವವರೇ ಎಲ್ಲವನ್ನೂ ಕಂಟ್ರೋಲ್ ಮಾಡುತ್ತಾರೆ. ಆದ್ದರಿಂದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಅವರ ಬದಲು ಡೆಪ್ಯುಟೀ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಎನ್ನುವ ಅಧಿಕಾರಿಗಳಿಗೆ ಇದನ್ನು ವಹಿಸಿದರೆ ಸರಿಯಾಗಿರುತ್ತದೆ, ಇದರಿಂದ ಜನರಲ್ ಕಂಟ್ರೋಲ್ ಮಾಡುವುದಕ್ಕೂ ಅನುಕೂಲವಾಗುತ್ತದೆ. ಆದುದರಿಂದ ಡೆಪ್ಯುಟೀ ಸೂಪರಿಂಟೆಂಡೆಂಟವರಿಗೇ ಎಲ್ಲ ಪವರುಗಳನ್ನೂ ಡೆಲಿಗೇಟು ಮಾಡಿ ನೇಮಿಸಿದರೆ ಅವರೇ ಎಲ್ಲ ಸೂಪರ್‌ವಿಷನ್ನು ಮಾಡಲು ಅನುಕೂಲವಾಗುತ್ತದೆ.

13ನೇ ಕ್ಲಾಸಿನಲ್ಲಿ ಈ ರೀತಿಯಾಗಿ ಹೇಳಿದೆ :—

"POWERS, PROTECTION AND CONTROL : (2) No prosecution shall be instituted against a member of the Village Defence Party in respect of anything done or purporting to be done in the exercise of his power or the discharge of his functions or duties as such member, except with the previous sanction of the Government."

ಈ ಸಭೆಯ ಮೆಂಬರನ್ನು ಅರೆಸ್ಟು ಮಾಡಬೇಕಾದರೆ ಸ್ಪೀಕರ್‌ರವರ ಅಪ್ಪಣೆಯನ್ನು ಪಡೆಯಬೇಕೆನ್ನುವ ಒಂದು ಸಂಪ್ರದಾಯ ಇದೆ. ಆದರೆ ವಾಲಂಟರಿ ಆರ್ಗನೈಜೇಷನ್ನುಗಳಿಗೂ ಇದೇ ರೀತಿ ಇರಬೇಕೆಂದು ಇಲ್ಲಿ ಹೇಳಿದೆ.

"(2) No prosecution shall be instituted against a member of the Village Defence Party in respect of anything done or purporting to be done in the exercise of his power or the discharge of his functions or duties as such member except with the previous sanction of the Government."

ಇಂತಹ ಪರ್ಮಿಷನ್ನು ತೆಗೆದುಕೊಳ್ಳುವುದು ಸಾಕು ಎಂದು ತೋರುತ್ತದೆ. ಇನ್ನು ಈ ವಾಲಂಟರಿ ಆರ್ಗನೈಸೇಷನ್ನುಗಳ ಮೆಂಬರುಗಳು ಸರ್ಟಿಫಿಕೇಟ್ ಆಫ್ ಅಪಾಯಿಂಟುಮೆಂಟು ಇತ್ಯಾದಿಗಳನ್ನು ವಾಪಸು ಕೊಡದೇ ಇದ್ದರೆ ಅಂತಹವರಿಗೆ ಒಂದು ತಿಂಗಳ ಶಿಕ್ಷೆ ಅಥವಾ ಒಂದು ನೂರು ರೂಪಾಯಿಗಳ ಜುಲ್ಮಾನೆ ವಿಧಿಸಬೇಕೆಂದಿದೆ. ಆದರೆ ಇದರಲ್ಲಿರುವ ಒಂದು ತಿಂಗಳ ಶಿಕ್ಷೆ ಎನ್ನುವುದನ್ನು ವಜಾ ಮಾಡಿ ಬರೀ ಒಂದು ನೂರು ರೂಪಾಯಿಗಳಷ್ಟು ಜುಲ್ಮಾನೆ ವಿಧಿಸತಕ್ಕದ್ದು ಎಂದು ಇದ್ದರೆ ಸಾಕು ಎಂದು ನಾನು ಸೂಚನೆ ಮಾಡುತ್ತಿದ್ದೇನೆ.

ಇನ್ನು 17ನೇ ಸೆಕ್ಷನ್ನಿನ ಶೀರ್ಷಿಕೆ ಹೀಗಿದೆ :

"Members of the Village Defence Parties not disqualified from being members of local authorities :—

EXPLANATION ನಲ್ಲಿ ಈ ರೀತಿ ಹೇಳಿದೆ :

"For the purpose of this section, 'local authority' includes a Municipal Corporation, Municipal Council, Borough, Municipality, Sanitary Board, a Notified Area Committee, Taluk Development Board and Village Panchayats."

ಎಂದಿದೆ ; ಇದರ ಜೊತೆಗೆ ಕೋ-ಆಪರೇಟೀವ್ ಸೊಸೈಟಿಯನ್ನು ಸೇರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ಪ್ರತಿಯೊಂದು ಗ್ರಾಮಗಳಲ್ಲಿಯೂ ಸೊಸೈಟಿಗಳು ಆಗಿವೆ. ಗ್ರಾಮಪಂಚಾಯತಿಗಳ ಜೊತೆಗೆ ಸೊಸೈಟಿಗಳನ್ನೂ ಸೇರಿಸುವುದು ಸೂಕ್ತವಾಗಿರುತ್ತದೆ. ಒಟ್ಟಿನಲ್ಲಿ ಈಗ ತಂದಿರತಕ್ಕ ಮಸೂದೆಯ ಮೇರೆಗೆ ಗ್ರಾಮ ರಕ್ಷಕ ದಳಗಳನ್ನು ಏರ್ಪಡಿಸಬೇಕೆಂದಿರುವುದು ಸರಿಯಾದುದು. ಇಂತಹ ವಾಲಂಟರಿ ಸಂಸ್ಥೆಗಳಿಂದ ಗ್ರಾಮಗಳಲ್ಲಿರತಕ್ಕ ಜನರಿಗೆ ಸುರಕ್ಷಿತವಾಗಿರಲು ಅನುಕೂಲವಾಗುತ್ತದೆ ಎಂದು ಹೇಳಿ ನಾನು ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri R. S. HEGDE (Honnavar).—Sir, I welcome this Bill and wholeheartedly support it and commend it to the House for its wholehearted support. This is based in my opinion, on the analogous provisions of the Bombay Act, as well as on the directive of the Central Government after the China affair. In many of the villages, the village volunteer force has been established after the Chinese invasion. Then, what is called the defence labour bank is also established where contribution to the development of the village has been through labour and not through cash. So, what is there as a moral obligation on every adult of the village has now been given a legal shape. That is all. Nobody should

(SRI R. S. HEGDE)

have any apprehension about this Bill because safety of property, security as well as economic uplift of the villages is sought to be secured through this Bill. Though the words 'economic uplift' have not been used, preservation of property implies it. Nobody should apprehend that this Village Defence Parties Bill is going to encroach upon the rights of the people. Suppose the police party is increased in a particular village. We bear with it because we feel that it is necessary for safeguarding the property and security of the people in the village. In the same way, this will only supplement the contribution by the police. If we can bear with the police, I see absolutely no reason why we should not bear with this Bill which is going to be enacted into law. From this point of view this Bill has to be viewed. If everything is good, no police is necessary. If everything is good, no law courts no lawyers, no legislators are necessary and even this legislation would, become superfluous in an idealistic State like 'Rama Raj'. Because something is lacking, something is wrong somewhere, all these Acts are necessary with a view to change the human heart. Human hearts are not changed even by the preaching of morals; legislation has to intervene to change the human heart.

AN HON'BLE MEMBER.—It has been there in vogue in the Bombay Area since 1951 and what is the good work turned out by it?

Sri G. V. GOWDA.—I am reading from the statement of objects and reasons.

5-30 P.M.

Sri R. S. HEGDE.—It has been there in the Bombay Police Act and the Superintendent has to take certain action after the Act is passed. In Bombay Karnatak, speaking about North Canara District, there is no such thing contemplated.

Sri C. J. MUKKANNAPPA.—The experience of my friend Sri Hegde and Sri Patil creates great doubts in our minds.

Sri R. S. HEGDE.—Under Section 3, some action has been taken by the Government to constitute village voluntary force and in all such cases where an emergency exists and where the people desire and police also desire that defence parties should be established, then only it should be established. Nobody should apprehend that this Bill which is going to be enacted is encroaching upon the rights or curtailing the liberty of the people. Section 7 of this Bill regarding qualifications has been criticised. After all, village heads are not going to be appointed by the Public Service Commission. 'Fit and capable' as ordinarily understood has got a dictionary meaning. If he is mentally fit, physically fit and morally fit, such adults will constitute the village voluntary force. So, the phrase 'fit and capable' has a clear meaning and I do not think any other definition of fit and capable is necessary under Section 7. Then Sir, another attack has been made about against the control and training of members and officers. Under Clause 11, control of training of members

and officers has been provided for proper rules will have to be made for this training. It is not correct to say that there is no provision for training. Then Sir, another important attack has been that this force is going to become a political force. There is no monetary consideration so far as village forces are concerned. As far as village defence parties are concerned, they are not getting any salary. They might get some T. A. or D. A. which cannot be said to be salary. So, he is not actually under the mercenary hold of the Government at all. Then, if he is not under the mercenary hold of the Government, I fail to understand how the Government can influence them. Then, there is another complaint that they belong to a particular party. The country has accepted the principle of democracy. If some other party rules, the same party members are going to be there. It cannot be said that it becomes part and parcel of a political party. After all, we have Government servants with some intelligence, some individuality and some originality and some freedom and I do not think that by enlisting members for a defence party, they will become part and parcel of the Congress Organisation or P. S. P., or Swatantra Organisation. Therefore such a meaning and such a motive cannot be attributed at all to defence parties.

Sri C. J. MUKKANNAPPA.—Do these village defence parties consist of girls and women of age between 20 and 50? May I know whether Bombay had any experience about it?

Sri R. S. HEGDE.—I have no such experience of co-education in this party.

Sri G. V. GOWDA.—The wording "Every person" includes both men and women.

Sri R. S. HEGDE.—I have no experience. As far as powers of village defence parties are concerned, they have got police duties only when they are called out for duty.

Sri C. J. MUKKANNAPPA.—Even in N. C. C. there are women. Kithoor Chennamma and Jansi Lakshmi Bai fought battles. Girls above 20 years of age and women within 50 years are also eligible to become members of Village Defence Parties.

Sri R. M. PATIL.—My friend has misunderstood the clause. A member of the village defence party means a person appointed under Section . If that person is male or female, it does not matter. It all depends upon the necessity of the village and physical fitness and capability to manage the affairs

Sri C. J. MUKKANNAPPA.—The clause is very silent. The Superintendent may by a written order appoint any person eligible as a member of the Village Defence Party. I want to know definitely whether ladies are included.

Sri R. S. HEGDE.—I have no experience. As far as Home Gaurds and N. C. C. are concerned, they are only in urban areas. The very name of this Bill suggests that this is meant for villages. As a person especially coming from Malnad tract, I say this defence force is absolutely necessary because our villages are so sparsely situated that there will be 3 or 4 houses in one village and after another 3 or 4 miles, there will be another 3 or 4 houses. It is absolutely impossible for the present strength of police to Prevent successfully and effectively all the crimes that occur there.

Sri R. S. HEGDE.—As far as the duties are concerned, when they are not on duty, they will never be Police Officers. If they are not called out for duty, I do not think they will be having police powers. Finally, as far as representations from these persons to the various elective posts are concerned, they must be given a chance. Under this Act, they are not having an office of profit. But the very fact of their public service should not disqualify them from becoming members. I, therefore, hope that this House will give its whole hearted support to this Bill.

†ಶ್ರೀ ಕೆ. ಪಿ: ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈ ದಿನ ಈ ಸಭೆಯು ಮುಂದೆ ಗ್ರಾಮ ಸಂರಕ್ಷಣಾದಳದ ಬಿಲ್ಲನ್ನು ಮಂಡಿಸಿದ್ದಾರೆ. ಆದರೆ ಗ್ರಾಮರಕ್ಷಣಾ ದಳವೇನಿದೆ ಇದು ಮುಂದೆ ಗ್ರಾಮ ಭಕ್ಷಣಾ ದಳವಾಗದೇ ಇದ್ದರೆ ನನಗೆ ಬಹಳ ಸಂತೋಷ. ಈ ಮಸೂದೆಯಲ್ಲಿ ಈ ಬಗ್ಗೆ ಹಣಕಾಸಿನ ಖರ್ಚು ಏನಿಲ್ಲವೆಂದು ಹೇಳಿದ್ದಾರೆ: ಕೆಲವು ಉದ್ಯೋಗಗಳು ಎಂದು ನಮೂದು ಮಾಡಿ, ಅಂತಹವರಿಗೆ ಬೇಕಾದರೆ 200–300 ರೂಪಾಯಿಗಳನ್ನು ಮಾತ್ರ ಕೊಡಬೇಕೆಂದು ಹೇಳಿದ್ದಾರೆ. ಹಿಂದೆ ರಾತ್ರಿ ಕಾಲದಲ್ಲಿ ಪೋಲೀಸು ಕಾವಲು ಇರುತ್ತಿದ್ದಿತು. ಕೆಲವು ಕಾಡು ಪ್ರದೇಶಗಳಲ್ಲಿ ರಾತ್ರಿ ಹೊತ್ತು ಕಾಡು ಸಂರಕ್ಷಣೆಗಾಗಿ ಪೋಲೀಸಿನವರು ಸಂಚಾರ ಮಾಡಬೇಕೆಂದು ಅಡಿಷನಲ್ಲಾಗಿ 3-4 ಜನರನ್ನು ನೇಮಿಸುತ್ತಿದ್ದರು. ಅವರಿಂದಲೇ ಕಳ್ಳತನ ಜಾಸ್ತಿಯಾಗುತ್ತದೆಂದು ಕಂಡು ಹಿಂದಿನ ಸರ್ಕಾರ ಅವರನ್ನು ತೆಗೆದು ಹಾಕಿದ್ದರು. ಇವರಿಂದ ರಕ್ಷಣೆ ಪಡೆಯುವುದಕ್ಕೆ ಬದಲು ಇವರಿಂದ ಆಗತಕ್ಕ ತೊಂದರೆಗಳನ್ನು ತಪ್ಪಿಸಿಕೊಂಡರೆ ಸಾಕು ಎಂದು ಜನ ಹೇಳುತ್ತಿದ್ದರು. ಅಂದ ಮೇಲೆ ಪೋಲೀಸಿನವರಿಂದ ಯಾವ ವಿಧವಾದ ರಕ್ಷಣೆಯೂ ಹಳ್ಳಿಗಳಲ್ಲಿಲ್ಲವೆಂದು ನಾನು ಧಾರಾಳವಾಗಿ ಹೇಳುತ್ತೇನೆ. ನನ್ನ ಸ್ನೇಹಿತರಾದ ಗೃಹ ಸಚಿವರು ನನ್ನ ಜೊತೆಯಲ್ಲಿ ಬಂದರೆ ಪೋಲೀಸಿನವರಿಂದ ಎಷ್ಟರ ಮಟ್ಟಿಗೆ ಕೆಲಸ ಕಾರ್ಯಗಳಾಗುತ್ತಿವೆಯೆಂಬುದಕ್ಕೆ ಒಂದೆರಡು ಕೇಸುಗಳನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುತ್ತೇನೆ. ಆದ್ದರಿಂದ ಈ ತರಹದ ಕಾನೂನುಗಳನ್ನು ಮಾಡಿ ಇಲ್ಲದ ಸಾಲದ ಹೊರೆಯನ್ನು ರೈತನ ಮೇಲೆ ಏರಿಸಲು ಹೊರಟಿದ್ದಾರೆ. ಇದರಿಂದ ಏನು ಅವರಿಗೆ ಉಪಕಾರ ಮಾಡಿದಂತಾಗುತ್ತದೋ ನನಗೇ ಗೊತ್ತಿಲ್ಲ. ಹಿಂದಿನ ಸರ್ಕಾರ ಇದ್ದುದನ್ನು ತೆಗೆದು ಹಾಕಿದ್ದಾರೆ. ಈಗ ಇವರು ಹೊಸದಾಗಿ ಒಂದು ರಾಜ ಭವನವನ್ನು ನಿರ್ಮಾಣ ಮಾಡಬೇಕೆಂದು ಹೊರಟಿದ್ದಾರೆ. ಈಗ ಸದ್ಯಕ್ಕೆ ದನಕರುಗಳಿಗೇ ಮೇವು ಇಲ್ಲ. ಜನಗಳಿಗೆ ಅನ್ನವಿಲ್ಲ. ಇದನ್ನು ಕೂಡ ತಾಲ್ಲೂಕು ಬೋರ್ಡ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಮಾಡಿದ ಹಾಗೆ ಮಾಡುತ್ತಾರೆ. ಇದರಿಂದ ಮುಂದೆ ಪಿ. ಎಸ್. ಪಿ. ಅಥವಾ ಕಮ್ಯೂನಿಸ್ಟ್ ಸರ್ಕಾರಕ್ಕೆ ಅನುಕೂಲವಾಗುತ್ತದೆ; ಉಪಕಾರ ಮಾಡುತ್ತಿದ್ದೀರಿ. ಈಗ ಅವರು ಸದ್ಯಕ್ಕೆ ಬಿದ್ದು ಹೋಗುತ್ತಿದ್ದಾರೆ.

ಶ್ರೀ ಆರ್. ಎಂ. ಪಾಟೀಲ್.—ನೀವು ಬರುತ್ತೀರಲ್ಲಾ ನಿಮಗೆ ಉಪಕಾರವಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾವು ಬಂದ ಕಾಲಕ್ಕೆ ನೋಡೋಣ.

ಇನ್ನು ಗ್ರಾಮ ರಕ್ಷಣಾ ಮಂಡಲಿಯ ಸದಸ್ಯರಾಗಲು ವಯೋಮಿತಿ 20 ರಿಂದ 50 ರೊಳಗೆ ಇರಬೇಕೆಂದು ಮಸೂದೆಯಲ್ಲಿ ಹೇಳಿದ್ದಾರೆ. ನಾನು ಹೇಳುವುದೇನೆಂದರೆ 20 ರೊಳಗೆ ಇರಬೇಕು ಹಾಗೂ 50 ರ ಮೇಲೆ ಆಗಬಾರದು. ಸ್ವಂತ ಆಸ್ತಿ, ಮನೆ ಮಠ ಇಟ್ಟುಕೊಂಡಿರುತ್ತಾರೆ. 50 ಕ್ಕೆ ಮೇಲ್ಪಟ್ಟವರನ್ನು ಇದರಲ್ಲಿ ಸೇರಿಸಿದರೆ, ಕೆಲಸಗಳು ಸಮರ್ಪಕವಾಗಿ ಆಗುವುದಿಲ್ಲ. 20ರೊಳಗೆ ಇರುವವರನ್ನು ಸೇರಿಸಿದರೆ ಅವರು ಉತ್ಸಾಹ ಶಾಲಿಗಳಾಗಿರುತ್ತಾರೆ, ಕೆಲಸಗಳನ್ನು ಮುತುವರ್ಜಿಯಿಂದ ಕಲಿತುಕೊಳ್ಳುತ್ತಾರೆ. ಅದನ್ನು ಬಿಟ್ಟು ಹೆಚ್ಚು ವಯಸ್ಸಿನವರನ್ನು ಇದರಲ್ಲಿ ಹಾಕಬಾರದು.

ಗ್ರಾಮ ರಕ್ಷಣಾ ಮಂಡಳಿಯೆಂದು ಹೆಸರು ಇಟ್ಟಿದ್ದಾರೆ. ಆದರೆ ಇಂತಹ ಬೋರ್ಡುಗಳು ನಮ್ಮ ಸರ್ಕಾರದಲ್ಲಿ ಹೆಸರಿಗೆ ಮಾತ್ರ ಇವೆಯೇ ಹೊರತು ಕೆಲಸ ಕಾರ್ಯಗಳೇನೋ ಸುಗಮವಾಗಿ ನಡೆಯು ತ್ತಿಲ್ಲ. ಇವು ಹೆಸರಿಗೆ ಮಾತ್ರ ಇವೆಯೆಂದು ನನಗೆ ಕಾಣುತ್ತದೆ. ಈ ಮಂಡಲಿಯೂ ಹಾಗೆಯೇ ಆಗುತ್ತದೋ ಏನೋ ಗೊತ್ತಿಲ್ಲ. ಇಂತಹ ಮಸೂದೆಗಳನ್ನು ತರುವುದಕ್ಕೆ ಬದಲು ಗ್ರಾಮಸ್ಥರ ಸೌಕರ್ಯಕ್ಕಾಗಿ ಮಾಡುವಂತಹ ಬೇಕಾದಷ್ಟು ಬಿಲ್ಲುಗಳನ್ನು ಈ ಸಭೆಯಲ್ಲಿ ತರಬೇಕೆಂದು ನಾನು ಹೇಳುತ್ತೇನೆ. ಇಂತಹವುಗಳನ್ನು ಉಪಯೋಗಿಸಿ ಎಲೆಕ್ಷನ್ನಿನಲ್ಲ ಚೆನ್ನಾಗಿ contest ಮಾಡಬಹು ದೆಂದು ಇವರು ತರುತ್ತಿದ್ದಾರೆ. ಮುಖ್ಯವಾಗಿ ಬೊಂಬಾಯಿ ಪ್ರದೇಶದಲ್ಲಿ ಆಗುವಷ್ಟು ಖೂನಿ ಕೇಸುಗಳು ನಮ್ಮ ಮೈಸೂರಿನಲ್ಲಿ ಆಗುವುದಿಲ್ಲವೆಂಬುದನ್ನು ಮಾನ್ಯ ಮಂತ್ರಿಗಳು ಬೇಕಾದರೆ ಅಂಕಿ ಅಂಶಗಳಿಂದ ತಿಳಿಯಬಹುದು.

ಶ್ರೀ ಆರ್. ಎಂ. ಪಾಟೀಲ್.—ನಿಮ್ಮ ಊರಿಗೆ ಈ ಕಾನೂನನ್ನು ಅನ್ವಯಿಸುವುದನ್ನು ಬಿಟ್ಟರೆ ಆಯಿತು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅಂದ ಮೇಲೆ ಇಂತಹ ಮಸೂದೆಗಳಿಗಾಗಿ ಏತಕ್ಕೆ ಇಲ್ಲಿ ಕಾಲ ಕಳೆಯಬೇಕು ? ಈ ಬಗ್ಗೆ ಬೇಕಾದಷ್ಟು ದೂರುಗಳು ಬರುವಾಗ ಈ ಮನೆಯು ಕಾಲ ವ್ಯಯ ಮಾಡುವುದಕ್ಕೆ ನಾನು ಇಚ್ಛಿಸುವುದಿಲ್ಲ. ಪೋಲಿಸಿನವರಿಂದಲೇ ರಾಜ್ಯದಲ್ಲಿ ಅದರಲ್ಲೂ ಬೊಂಬಾಯಿ ಪ್ರದೇಶಗಳಲ್ಲಿ ಖೂನಿ ಕೇಸುಗಳು ದರೋಡೆ, ಸುಲಿಗೆ, ಇತ್ಯಾದಿ ನಡೆಯುತ್ತಿರುತ್ತವೆ. ಆ ಸ್ಥಳ ದಲ್ಲಿ ಮೊದಲಿನಿಂದಲೂ ಇಂತಹ ಕಾನೂನು ಇದ್ದರೂ ಅಂತಹ ಕೇಸುಗಳು ನಡೆಯುತ್ತಾ ಇರುತ್ತವೆ, ಹಿಂದೆ ಹಳೆಯ ಮೈಸೂರು ದೇಶದಲ್ಲಿಯೂ ಕೂಡ ಒಂದೊಂದು ಊರಿಗೆ ಐದೈದು ಜನರಂತೆ ಆರಿಸಿ ಅವರೇ ಚಾವಡಿಗಳಲ್ಲಿ ಇದ್ದುಕೊಂಡು ಗ್ರಾಮ ರಕ್ಷಣೆ ಮಾಡುತ್ತೇವೆಂದು ಹೋಗಿ ಅವರೇ ಕಳ್ಳತನ ಮಾಡುವುದಕ್ಕೆ ಷುರು ಮಾಡುತ್ತಿದ್ದರು. ಜನಗಳಿಗೆ ಪ್ರತ್ಯಕ್ಷ ಕೂಲಿ ವೃತ್ತಿ ಎಂದು ಬಾಯಿಂದಹೇಳಿ ಹುಲ್ಲು ಕದಿಯುವುದು, ಅನೇಕರ ಆಸ್ತಿ ಪಾಸ್ತಿಗಳನ್ನು ದೋಚಿಕೊಂಡು ಹೋಗುವುದು ಈ ಕೆಲಸ ಗಳನ್ನು ಅವರು ಮಾಡುತ್ತಿದ್ದರು. ಅವರು ಯಾರು ಬೇಕಾಗಿಲ್ಲವೋ ಅಂತಹವರಲ್ಲಿ ವೈಷಮ್ಯ ಬೆಳೆ ಸುವುದು, ಇವೆಲ್ಲ ಬಹಳವಾಗಿ ನಡೆಯುತ್ತಿತ್ತು. ಈಗಲೂ ಅನೇಕ ಕಡೆಗಳಲ್ಲಿ ಇದು ನಡೆಯುತ್ತಿವೆ. ಆದ್ದರಿಂದ ಇಂತಹ ಸಂದರ್ಭದಲ್ಲಿ ಈ ಕಾನೂನುಗಳನ್ನು ತರುವುದು ಆವಶ್ಯಕವಿಲ್ಲ. ಯಾವುದಾ ದರೂ ಒಂದು ಒಳ್ಳೆಯ ವ್ಯವಸ್ಥೆ ಮಾಡಬೇಕು. ಮಾಮೂಲು ವಸೂಲು ಮಾಡುವುದಕ್ಕೆ ಅವರೇ ಹೋಗುತ್ತಿದ್ದರು. ಈಗ ಇವರ ಮೂಲಕ ಆ ಮಾಮೂಲನ್ನು ತರಿಸಿಕೊಳ್ಳುವುದಕ್ಕೊಂದು ಅವ ಕಾಶವಾಗುತ್ತದೆ. ಈಗಿನ ಗೃಹ ಸಚಿವರು ಎರಡು ಸಾರಿ ಮಂತ್ರಿಗಳಾಗಿದ್ದಾರೆ. ಆದರೆ ಜನ ಗಳಿಗೆ ಅನುಕೂಲವನ್ನುಂಟು ಮಾಡುವ ಮಸೂದೆಗಳ ಕಡೆ ಇವರು ಇನ್ನು ಮುಂದೆ ಗಮನ ಕೊಡ ಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಈ ವಿಧೇಯಕವನ್ನು ಸಾಮಾನ್ಯವಾಗಿ ನಾನು ಸ್ವಾಗತಿಸುತ್ತೇನೆ. ಆದರೆ ಇದರ ಒಕ್ಕಣಿಕೆಯನ್ನು ಓದಿ ದರೆ ಮತ್ತು ಅದರೊಳಗೆ ಬರೆದಿರುವುದನ್ನು ನೋಡಿದರೆ ಸ್ವಲ್ಪ ಮನಸ್ಸಿಗೆ ನಿರಾಶೆ ಹುಟ್ಟಿಸುವಂತಿದೆ. ಇದರಲ್ಲಿ statement of objects and reasons ನಲ್ಲಿ ಒಂದು ಕಡೆ ಈ ರೀತಿ ಹೇಳಿದ್ದಾರೆ.

> "In the present National emergency when the police are engaged in important duties, it is considered necessary to organise Village defence parties throughout the State for the defence of the villages, protection of persons and property and preservation of public order and tranquility"

ಹಾಗೆಯೇ ಮುಂದೆ ಫೈನಾನ್ಸಿಯಲ್ ಮೆಮೊರ್‍ಯಾಂಡಂನಲ್ಲಿ ಗ್ರಾಮ ಸಂರಕ್ಷಣಾ ಮಂಡಲಿ ಯನ್ನು ರಚನೆ ಮಾಡುವುದಕ್ಕೆ ವರ್ಷಕ್ಕೆ 25 ಸಾವಿರ ರೂಪಾಯಿಗಳು ಇಡೀ ಸಂಸ್ಥಾನಕ್ಕೆಲ್ಲ ಖರ್ಚಾ ಗುತ್ತದೆಂದು ಹೇಳಿದ್ದಾರೆ. ಆದರೆ ಈ ಬಿಲ್ಲಿನಲ್ಲಿರತಕ್ಕ ಒಕ್ಕಣಿಕೆಯನ್ನು ನೋಡಿದರೆ ನನ್ನ ಮನ ಸ್ಸಿಗೆ ಅಷ್ಟು ಆನಂದವೆನಿಸುವುದಿಲ್ಲ. ಏಕೆಂದರೆ ಹಳ್ಳಿಗಳಲ್ಲಿ ಅವರ ಜೀವನೋಪಾಯಕ್ಕೆ ಅನುಕೂಲ ವಾಗುವ ದೃಷ್ಟಿಯಿಂದ ಸಂರಕ್ಷಣೆಯನ್ನು ಕೊಡುವುದೇನಿದೆ ಅದು ಒಂದು ದೊಡ್ಡ ಯೋಜನೆ ಸರ್ಕಾ ರದವರು ಇಂತಹ ಕಾನೂನುಗಳನ್ನು ರಚನೆ ಮಾಡುವಾಗ ದೀರ್ಘವಾಗಿ ಆಲೋಚನೆ ಮಾಡಬೇಕು. ಆದರೆ ಕೇವಲ ಎಮರ್ಜೆನ್ಸಿ ಮಟ್ಟಿಗೆ ಈ ಬಾಬಿಗೆ 25 ಸಾವಿರ ರೂಪಾಯಿಗಳನ್ನು ವೆಚ್ಚ ಮಾಡುತ್ತಿ ದ್ದೇವೆಂಬುದಾಗಿ ಹೇಳಿದ ಮೇಲೆ ಸರ್ಕಾರದವರು ಈ ಗ್ರಾಮಸಂರಕ್ಷಣಾ ಮಂಡಲಿಗೆ ಸಾಕಷ್ಟು ಗಮನ ಕೊಡುತ್ತಿಲ್ಲವೆಂದು ಹೇಳಹಬುದು. ಏಕೆಂದರೆ ಇದು ಬಹಳ ಕಡಿಮೆ. ಇವತ್ತಿನ ದಿವಸ ಗ್ರಾಮಗಳಲ್ಲಿ ಖೂನಿ, ದರೋಡೆ, ಕಳ್ಳತನ, ಮನೆಗಳಿಗೆ ಬೆಂಕಿ ಹಚ್ಚುವುದು ಜಾಸ್ತಿಯಾಗಿರುವುದ

(ಶ್ರೀ ಎಂ. ಆರ್. ಪಾಟೀಲ್)

ರಿಂದ ಪ್ರತಿಯೊಂದು ಹಳ್ಳಿಯಲ್ಲೂ ಡಿಫೆನ್ಸ್ ಫೋರ್ಸಸನ್ನು ಆರ್ಗನೈಜ್ ಮಾಡಿ ಅವುಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಅವು ನಮ್ಮ ದೇಶದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡುವುದು ಅವಶ್ಯಕ. ಈ ಬಿಲ್ಲಿನಲ್ಲಿ ಆ ಬಗ್ಗೆ ಅಷ್ಟು ವಿವರವಾಗಿ ಅವಕಾಶಗಳು ಇಲ್ಲದೆ ಹೋದರೂ ಸರ್ಕಾರದವರು ಈ ವಿಚಾರ ವನ್ನು ತಮ್ಮ ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಹಳ್ಳಿಯಲ್ಲೂ ಡಿಫೆನ್ಸ್ ಫೋರ್ಸಸನ್ನು ಶಾಶ್ವತ ವಾಗಿ ರಚಿಸುವಂತೆ ಮಾಡಬೇಕು. ಅದರಲ್ಲಿ ಯೋಗ್ಯರಾದವರನ್ನು ಆರಿಸಿಕೊಂಡು ಒಂದು ಸಂಘ ಟನೆಮಾಡಿಕೊಂಡು ಯೋಜನೆಯನ್ನು ಮಾಡುವುದು ಈಗಿನ ಸನ್ನಿವೇಶದಲ್ಲಿ ಅತ್ಯಾವಶ್ಯಕ. ಆದರೆ ಈಗಿನ ಮಸೂದೆಯಲ್ಲಿ ಹೇಳಿರುವಂತೆ ಟೆಂಪೊರರಿಯಾಗಿ ಇಡೀ ಸಂಸ್ಥಾನಕ್ಕೆ ಕೇವಲ 25 ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದರಿಂದ ಏನೂ ಪ್ರಯೋಜನವಾಗಲಾರದು. ಕೆಲವು ಕಡೆಗಳಲ್ಲಿ ಮಾತ್ರ ಈ ಗ್ರಾಮ ಸಂರಕ್ಷಣಾ ಮಂಡಲಿಗಳನ್ನು ತೆಗೆಯಬಹುದೇ ಹೊರತು ಎಲ್ಲಾ ಕಡೆಗಳಲ್ಲೂ ರಚಿಸುವುದಕ್ಕಾಗುವುದಿಲ್ಲ. ಯಾರಾದರೂ ಸದಸ್ಯರು ಅವರಿಗೆ ಬೇಕಾದ ಕಡೆಗಳಲ್ಲಿ ಕೇಳಿದರೆ ಅಂತ ಹವರಿಗೆ ಮಾತ್ರ ಅವರ ಸ್ಥಳಗಳಲ್ಲಿ ಈ ಮಂಡಲಿಗಳನ್ನು ರಚನೆ ಮಾಡುವುದರಿಂದ ಕೆಲವರ ಮನಸ್ಸಿನ ಮೇಲೆ ಒಂದು ರೀತಿಯ ಪರಿಣಾಮವುಂಟಾಗುತ್ತದೆ.

Sri M. Y. GHORPADE.—Where does it say that it is meant only for the period of emergency?

Sri M. R. PATIL.—In the Statement of Objects and Reasons, it is stated "In the present national emergency......"

Sri M. Y. GHORPADE.—It does not mean to say that it is confined to the period of emergency.

ಶ್ರೀ ಎಂ. ಆರ್. ಪಾಟೀಲ್.—ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತು ಯಾವುದೇ ಒಂದು ಹಳ್ಳಿಯೊಳಗಾಗಲೀ, ತಾಲ್ಲೂಕಿನೊಳಗಾಗಲೀ, ಜಿಲ್ಲೆಯೊಳಗಾಗಲೀ ವಿಲೇಜ್ ಡಿಫೆನ್ಸ್ ಫೋರ್ಸ್ ಸ್ಥಾಪನೆ ಮಾಡುವುದಾದರೆ ಅದು ಒಳ್ಳೆಯ ದೃಷ್ಟಿಯಿಂದ ಕೆಲಸ ಮಾಡು ವಂತಾಗಬೇಕು. ಆ ರೀತಿ ಮಾಡುವುದಾದರೆ ಅದರಿಂದ ದೇಶಕೆ ಕಲ್ಯಾಣವಾಗುತ್ತದೆ. ಈ ಬಿಲ್ಲಿನ ಕೆಲವೊಂದು ಕಲಮುಗಳನ್ನು ಓದಿದರೆ ಔಟ್‌ಲೈನ್ ಆಫ್ ಪ್ರೋಗ್ರಾಂ ಆಫ್ ವರ್ಕ್ಸ್ ಮಾತ್ರ ಇದೆ. ಈ ಮಸೂದೆಯಲ್ಲಿ ಕೆಲವೊಂದು ವಿಚಾರಗಳನ್ನು ಸರಿಯಾದ ರೀತಿಯಲ್ಲಿ ವಿವರಿಸಿಲ್ಲ. ಮತ್ತು ಗ್ರಾಮ ರಕ್ಷಣಾ ಮಂಡಲಿಗಳ ಸದಸ್ಯರಿಗೆ ಇರಬೇಕಾದ ಕೆಲಸಗಳು ಮತ್ತು ಅರ್ಹತೆಗಳು ಯಾವುವು ಎಂಬುದನ್ನು ವಿವರಿಸಿಲ್ಲ. ಅವರು ರೈಫಲ್ ಟ್ರೈನಿಂಗಿಗೆ ಹಾಜರಾಗತಕ್ಕದ್ದು ಮತ್ತು ಕೆಲಸ ಮಾಡತಕ್ಕದ್ದು ಏನು ಎಂಬುದನ್ನು ಯಾವುದನ್ನೂ ಸರಿಯಾಗಿ ವಿವರಿಸಿಲ್ಲ. ಪೋಲೀಸ್ ಸೂಪ ರಿಂಟೆಂಡೆಂಟರು ಗ್ರಾಮ ರಕ್ಷಣಾ ಮಂಡಲಿಗಳನ್ನು ರಚಿಸುವುದು ಎಂದು ಈ ಮಸೂದೆಯಲ್ಲಿ ಹೇಳಿ ದ್ದಾರೆ. ಇದು ಯಾವ ಪ್ರಕಾರ ಮಾಪರ್ಾಡಾದ ಸಂಸ್ಥೆಯಾಗುತ್ತದೋ ಗೊತ್ತಿಲ್ಲ. ಅಂತೂ ಈ ವಿಲೇಜ್ ಡಿಫೆನ್ಸ್ ಎನ್ನುವುದು ಎರಡು ಅಲುಗಿನ ಕತ್ತಿ ಇದ್ದ ಹಾಗೆ ಇದೆ. ಇದನ್ನು ಸದುಪಯೋಗ ಮಾಡಿಕೊಂಡರೆ ಇದರಿಂದ ಹಳ್ಳಿಗಳಿಗೆ ನಿಜವಾಗಿಯೂ ಕಲ್ಯಾಣವಾಗುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳದೇ ಇದ್ದರೆ ದುರುಪಯೋಗವಾಗುವ ಸಂಭವವೂ ಉಂಟು. ಹಿಂದೆ ಬೊಂಬಾಯಿ ಪ್ರದೇಶದಲ್ಲಿ ಪಟ್ಟಣಗಳಲ್ಲಿ ಹೋಮ್‌ಗಾರ್ಡ್‌ಅನ್ನು ಆರ್ಗನೈಜ್ ಮಾಡಿದ್ದರು. ಆ ಸಂದರ್ಭದಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟಿಗೂ ಹೋಮ್‌ಗಾರ್ಡ್ ಡಿಪಾರ್ಟ್‌ಮೆಂಟಿಗೂ ನಡುವೆ ಗಲಾಟೆ ಹತ್ತಿತ್ತು. ಆಗ ಈ ಹೋಮ್‌ಗಾರ್ಡಿನವರಿಗೆ ಟ್ರೈನಿಂಗ್ ಕೊಡುವುದಕ್ಕೆ ಒಬ್ಬ ಸಾಮಾನ್ಯವಾದ ಹೆಡ್‌ಕಾನ್‌ಸ್ಟೇಬಲ್‌ಅನ್ನ ಹಾಕಿದ್ದರು. ಇವನು ನೌಕರ ಮತ್ತು ಪಗಾರ ತೆಗೆದು ಕೊಳ್ಳುವ ನೌಕರ ಎನ್ನುವಂತಹ ಒಂದು ಟ್ರೀಟ್‌ಮೆಂಟ್ ಕೊಟ್ಟು ಅವರಲ್ಲಿ ಕೆಲವು ಮಟ್ಟಿಗೆ ಡಿಸ್ ಸ್ಯಾಟಿಸ್‌ಫ್ಯಾಕ್ಷನ್ ಇತ್ತು. ಆದ್ದರಿಂದ ಟ್ರೈನಿಂಗ್ ಕೊಡುವುದಕ್ಕೆ ಕಳುಹಿಸುವಂತಹ ಕಾನ್‌ಸ್ಟೇಬಲ್ ಟ್ರೈನಿಂಗ್ ಕೊಡುವಾಗ ಯಾವ ರೀತಿಯ ಮಾತುಗಳನ್ನೂ ಆಡದೆ ಮಾತಿನಲ್ಲಿ ಕಂಟ್ರೋಲ್ ಇರು ವಂತಹ ಮತ್ತು ಸಹಾನುಭೂತಿಯಿಂದ ಟ್ರೈನಿಂಗ್ ಕೊಡುವಂತಹ ಯೋಗ್ಯನಾದ ಕಾನ್‌ಸ್ಟೇಬಲ್ ಅನ್ನು ಕಳುಹಿಸುವುದು ಒಳ್ಳೆಯದು. ಹಿಂದೆ ಮಾತಿನಲ್ಲಿ ಕಂಟ್ರೋಲ್ ಇಲ್ಲದೆ ಇರತಕ್ಕ ಪೋಲೀಸ್ ಕಾನ್‌ಸ್ಟೇಬಲ್‌ಅನ್ನು ಈ ಹೋಮ್‌ಗಾರ್ಡ್ ಟ್ರೈನಿಂಗ್ ಕೊಡುವುದಕ್ಕೆ ಹಳ್ಳಿಗಳಿಗೆ ಕಳುಹಿಸಿ ಅದ ರಿಂದ ದುರುಪಯೋಗವಾಗಿದೆ ಇದರಿಂದ ಕೆಲವರಿಗೆ ಡಿಸ್‌ಕರೇಜ್ ಆಗಿದೆ. ಈ ಹೋಮ್‌ಗಾರ್ಡಿ ನಿಂದ ಹಳ್ಳಿಗಳಲ್ಲಿ ಎಷ್ಟೋ ಪಾರ್ಟಿ ಪಂಗಡಗಳಾಗಿವೆ. ಅದಕ್ಕೋಸ್ಕರ ನಾನು ವಿನಂತಿ ಮಾಡಿ ಕೊಳ್ಳುವುದೇನೆಂದರೆ ಪ್ರತಿಯೊಂದು ಹಳ್ಳಿಯಲ್ಲಿ, ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಎಲ್ಲಿ ಈ ಗ್ರಾಮರಕ್ಷಣಾ

ಮಂಡಲಿಗಳನ್ನು ಸ್ಥಾಪನೆ ಮಾಡುವುದಕ್ಕೆ ಜನ ಉತ್ಸಾಹದಿಂದ ಮುಂದೆ ಬರುತ್ತಾರೆಯೋ, ಸರ್ಕಾರಕ್ಕೆ ಸಹಕಾರ ಮಾಡುತ್ತಾರೆಯೋ ಅಲ್ಲಿ ಸ್ಥಾಪನೆ ಮಾಡಿದರೆ ಒಳ್ಳೆಯದು. ಕೊನೆಗೆ ಇಡೀ ಸಂಸ್ಥಾನದಲ್ಲಿ 10 ಹಳ್ಳಿಗಳಲ್ಲಿ, 10 ತಾಲ್ಲೂಕುಗಳನ್ನು ತೆಗೆದುಕೊಂಡು ಅಲ್ಲಿ ಈ ಗೃಹ ರಕ್ಷಣಾ ಮಂಡಲಿಗಳನ್ನು ರಚಿಸಿ ಯೋಗ್ಯನಾದ ಪೋಲೀಸ್ ಕಾನ್‌ಸ್ಟೇಬಲ್‌ನಿಂದ ಸರಿಯಾಗಿ ಟ್ರೈನಿಂಗ್ ಕೊಡಿಸಬೇಕು. ಆ ಕಾನ್‌ಸ್ಟೇಬಲನು ಟ್ರೈನಿಗಳನ್ನು ಆರಿಸಿಕೊಂಡು ಸಂಘಟಿತವಾದ ರೀತಿಯಲ್ಲಿ ಜನಗಳು ಮೆಚ್ಚುವಂತೆ ವಿಲೇಜ್ ಡಿಫೆನ್ಸ್ ಫೋರ್ಸನ್ನು ತಯಾರು ಮಾಡಬೇಕು. ಆ ರೀತಿ ಮಾಡುವುದಾದರೆ ಅದರಿಂದ ದೇಶಕ್ಕೆ ಕಲ್ಯಾಣ ಆಗುತ್ತದೆ. ಅದರಲ್ಲಿ ಸಂಶಯವಿಲ್ಲ. ಆದರೆ ಹಿಂದೆ ಹೋಮ್‌ಗಾರ್ಡ್‌ನವರಿಗೆ ಏನೊಂದು ಟ್ರೀಟ್‌ಮೆಂಟ್ ಸಿಕ್ಕಿತೋ ಅದು ಬಹಳ ದುರ್ದೈವ. ಅವರು ಲಡಾಯಿ ಮುಗಿದ ಮೇಲೆ ಅವರಿಗೆ ಸಿಕ್ಕಬೇಕಾದ ಭತ್ಯ ಸಿಕ್ಕದೆ ಅವರು ಬೆಂಗಳೂರಿನವರೆಗೂ ಒಂದು ಅರ್ಜಿಮಾಡಿ ಹೋದರು. ಆದರೆ ಯಾರೂ ಆ ಕಡೆ ಲಕ್ಷ್ಯಕೊಟ್ಟಿಲ್ಲ. ಲಡಾಯಿ ಮುಗಿದ ಮೇಲೆ ಡಿಫೆನ್ಸ್ ಫೋರ್ಸ್‌ಅನ್ನು ಅಲಕ್ಷ್ಯ ಮಾಡುವುದಾದರೆ ಅದನ್ನು ಮಾಡದೇ ಇರುವುದು ನೆಟ್ಟಗಾಗುತ್ತದೆ. ಈ ಡಿಫೆನ್ಸ್ ಫೋರ್ಸ್ ಸ್ಥಿರವಾಗಿ ಉಳಿಯಬೇಕು. ಹಾಗೆ ಮಾಡಿದರೆ ಇದರಿಂದ ಜನರ ಕಲ್ಯಾಣವಾಗುತ್ತದೆ. ಕೆಲವು ಸ್ಥಳಗಳಲ್ಲಿ ಎಂದರೆ ಈಗ ಹುಬ್ಬಳ್ಳಿಯಲ್ಲಿ ಕೆಲವರು ಬೆಳೆ ಇರುವ ಜಮೀನುಗಳಿಗೆ ದನಗಳನ್ನು ಬಿಡುತ್ತಾರೆ. ಅವರು ಆ ರೀತಿ ದನಗಳನ್ನು ಬೆಳೆ ಇರತಕ್ಕ ಜಮೀನುಗಳಿಗೆ ಬಿಟ್ಟಾಗ ಆ ದನಗಳನ್ನು ಯಾರಾದರೂ ಹೊಡೆಯುವುದಕ್ಕೆ ಹೋದರೆ ಅವುಗಳ ಮಾಲೀಕರು ಬಂದು ಆ ದನಗಳನ್ನು ಹೊಡೆದವರನ್ನು ಮರ್ಡರ್ ಮಾಡುತ್ತಾರೆ. ಈ ದೃಷ್ಟಿಯಿಂದ ಈ ಒಂದು ವಿಲೇಜ್ ಡಿಫೆನ್ಸ್ ಫೋರ್ಸನ್ನು ತಯಾರು ಮಾಡಿ ಅದನ್ನು ಉಪಯೋಗ ಮಾಡುವಂತಹ ಸಂಘಟನೆ ಮಾಡಿದರೆ ಅದರಿಂದ ಉಪಯೋಗವಾಗುತ್ತದೆ. ನಾನು ಈ ಸಭೆಯ ವೇಳೆಯನ್ನು ಹೆಚ್ಚು ತೆಗೆದುಕೊಳ್ಳದೆ ಎರಡು ಸೂಚನೆಗಳನ್ನು ಮಾತ್ರ ಮಾಡುತ್ತೇನೆ. ಈ ವಿಲೇಜ್ ಡಿಫೆನ್ಸ್ ಫೋರ್ಸ್‌ನ್ನು ಈ ದೇಶದಲ್ಲಿ ಸ್ಥಾಪನೆ ಮಾಡಲು 25 ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದನ್ನು ನೋಡಿದರೆ ಇದನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರಿಗೆ ಮನಸ್ಸು ಇದೆಯೋ ಇಲ್ಲವೋ ಎನ್ನುವಂತಹ ಸಂಶಯ ಬರುವುದರಿಂದ ಸರ್ಕಾರದವರು ಅದನ್ನು ನಿವಾರಣೆ ಮಾಡಬೇಕು. ಮತ್ತು ಈ ವಿಲೇಜ್ ಡಿಫೆನ್ಸ್ ಫೋರ್ಸ್ ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಇರುತ್ತದೆ ಎನ್ನುವಂಥಾ ಕಲ್ಪನೆಯನ್ನು ಕೊಡುತ್ತದೆ. ಆದ್ದರಿಂದ ಅದನ್ನು ಹೋಗಲಾಡಿಸಿ ಈ ವಿಲೇಜ್ ಡಿಫೆನ್ಸ್‌ಫೋರ್ಸ್ ಖಾಯಂ ಆದ ಸಂಸ್ಥೆಯಾಗಿ ಉಳಿಯುವಂತೆ, ಸ್ಥಿರವಾಗಿರುವಂತೆ ಸರ್ಕಾರದವರು ಮಾಡಬೇಕು. ಮತ್ತು ಈ ವಿಲೇಜ್ ಡಿಫೆನ್ಸ್ ಫೋರ್ಸಿಗೆ ಟ್ರೈನಿಂಗ್ ಕೊಡುವಂತಹ ಕಾಲಕ್ಕೆ ಉತ್ತಮವಾದ ಪ್ರಚಾರ ಮಾಡಬೇಕು. ಅದರಲ್ಲಿ ಉತ್ತಮವಾದ ಜನರನ್ನು ಸೇರಿಸಿಕೊಂಡು ಅವರು ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ಬರುವಂತೆ ಟ್ರೈನಿಂಗ್ ಕೊಡಬೇಕು. ಸರ್ಕಾರದವರು ಪೋಲೀಸ್ ಇಲಾಖೆಯವರಿಗೆ ಎಷ್ಟು ಹಣ ಮತ್ತು ಪ್ರೋತ್ಸಾಹವನ್ನು ಕೊಡುತ್ತಾರೆಯೋ ಅಷ್ಟೇ ಹಣ ಮತ್ತು ಪ್ರೋತ್ಸಾಹವನ್ನು ಕೊಟ್ಟು ಅವರು ಉತ್ತಮವಾದ ಕೆಲಸವನ್ನು ಮಾಡುವಂತೆ ಮಾಡಬೇಕು. ಅವರನ್ನು ಅಲಕ್ಷ್ಯ ಮಾಡಬಾರದು. ಈ ವಿಲೇಜ್ ಡಿಫೆನ್ಸ್‌ಫೋರ್ಸ್ ಜನಗಳಿಗೆ ಹೆಚ್ಚಿನ ಮೆಚ್ಚಿಗೆ ಬರುವಂತಹ ಕೆಲಸವನ್ನು ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri B. P. KADAM (Karwar).—Mr. Speaker, the Mysore Village Defence Parties Bill, 1964 is before the Assembly. At the outset I would like to wholeheartedly welcome the spirit of the Bill, the intentions of the Bill. But when I say so I have my own observations to make. I personally want a very clean healthy society, a good society, a peace-loving society, a society in which people would exercise their rights and enjoy privileges. In the statement of objects and reasons the Minister has stated "during the period of emergency". Even before the emergency was there, long back, this sort of village parties have been resorted to various parts of this country and also by Hitler in Germany. Immediately he came to power he had a second army. On the same lines Sri Morarji Desai had Home Guards. When the State police was in distress, the Homeguards used to be sent along with them. What was the work of the Homeguards—to carry on the Congress party work, to

(SRI B. P. KADAM)

carry on election propaganda. In peace times to be moving with all pomp like *bada Army sepoys*, guarding and aiding and almost giving entire guidance to their great village industry—the industry of bootleggers which is the only organised industry admitted by all honest people.

MR. DEPUTY SPEAKER.—The House will now rise and reassemble tomorrow at 8.30 a. m.

The House adjourned at Six of the Clock to meet again at Thirty Minutes past Eight of the Clock on Saturday, the 20th June 1964.